# ಮಾಡು ಇಲ್ಲವೆ ಮಡಿ

## ದೇಶಕ್ಕಾಗಿ ವೀರ ಮರಣವನ್ನಪ್ಪಿದ ವೀರ ಯೋಧ ಸಿ.ಎಸ್.ಯೋಗರಾಜ್– ಶ್ರದ್ಧಾಂಜಲಿ



C.S Yogaraj-Born-10-08-73- Died 15-3-2008



ದಾವಣಗೆರೆ ಜಿಲ್ಲೆ ಚನ್ನಗಿರಿ ತಾ॥ ಗೊಪ್ಪೇನಹಳ್ಳಿ ಗ್ರಾಮದಲ್ಲಿ ಚಿಕ್ಕೂಲಿಕೆರೆಯವರ ಮನೆ, ಶ್ರೀಮತಿ ಶಾರದಮ್ಮ ಶಂಕರಮೂರ್ತಿ ಇವರಿಗೆ 2 ಜನ ಹೆಣ್ಣು ಮಕ್ಕಳು 2 ಜನ ಗಂಡು ಮಕ್ಕಳು ಮತ್ತು ಒಬ್ಬರು ಅಜ್ಜಿ. ಈ ಒಂದು ಪರಿವಾರದಲ್ಲಿ ಬಾಲ್ಯ ಜೀವನ ಮಾಡುತ್ತಿರುವಾಗಲೇ 8ನೇ ವರ್ಷದ ಬಾಲಕನಿರುವಾಗಲೇ ತಂದೆಯು ಅನಾರೋಗ್ಯದ ಕಾರಣ ಅಸುನೀಗಿದರು. ಈ ಕುಟುಂಬದ ಮೇರು ಶಿಖರವಾಗಿದ್ದ ತಂದೆಯ ಕಣ್ಮರೆಯಿಂದ ಇಡೀ ಕುಟುಂಬವೇ ಕಗ್ಗತ್ತಲೆಯ ಕಾರ್ಮೋಡವಾಯಿತು.

ಈ ಸಂದರ್ಭದಲ್ಲಿ ಇನ್ನೇನು ಈ ಮಕ್ಕಳಗತಿ ಎಂದು ಹೆತ್ತ ತಾಯಿಯ ದುಃಖ ಮುಗಿಲುಮುಟ್ಟಿತು. ಆಗ ಹದಿ–ಹರೆಯದಲ್ಲಿಯೇ ತನ್ನ ಮಡಿಲಲ್ಲಿಯೇ ತನ್ನ ಮಗನ ಸಾವನ್ನು ಕಣ್ಣಾರೆ ಕಂಡ ಕಲ್ಲಿನಂತಹ ಹೃದಯದ ಅಜ್ಜಿ ಬೆನ್ನೆಲುಬಿನಂತೆ ಬೆಂಬಲವಾಗಿ ನಾಲ್ಕು ಮೊಮ್ಮಕ್ಕಳೊಡನೆ ಸೊಸೆಗೆ ಧೈರ್ಯವನ್ನು ಹೇಳುತ್ತಾ ಬಹಳ ಕಷ್ಟಕರ ಜೀವನವನ್ನು ಸಾಗಿಸುತ್ತಾ ನಾಲ್ಕು ಮಕ್ಕಳನ್ನು ದಿವಾಳಿ ಮಾಡದೆ ಬಾಲ್ಯ ಜೀವನದಲ್ಲಿಯೇ ಆಧ್ಯಾತ್ಮದ ಸನ್ಮಾರ್ಗವನ್ನು ತೋರಿಸಿ ಉತ್ತಮ ನಡೆ–ನುಡಿ ಸಂಸ್ಕೃತಿಯನ್ನು ಮಕ್ಕಳಲ್ಲಿ ಬೆಳೆಸಿದರು. ಹೀಗೆ ತಾಯಿ, ಅಜ್ಜಿಯ ಪಾಲನೆಯಲ್ಲಿ ಬಾಲ್ಯ ಜೀವನ ಕಳೆಯಿತು.



C.S Yogaraj House In Goppenahalli Davanagere Dist Karnaataka- India

<u>ವಿದ್ಯಾಭ್ಯಾಸ</u> : ದುಡಿಯುವವರೇ ಇಲ್ಲದ ಈ ಕುಟುಂಬದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಕಷ್ಟಕರ ಎನ್ನುವುದನ್ನು ಮನಗಂಡ ನಾಲ್ಕು ಮಕ್ಕಳೂ ಸಹ ಪ್ರೌಢ ಶಿಕ್ಷಣ, ಪದವಿಪೂರ್ವ ಶಿಕ್ಷಣ (ಪಿ.ಯು.ಸಿ)ವನ್ನು ಮುಗಿಸಿದೆವು. ಈ ನಿಟ್ಟಿನಲ್ಲಿ ಎಲ್ಲರಿಗೂ ದುಡಿದು ತಿನ್ನಬೇಕು, ಏನಾದರೊಂದು ಉದ್ಯೋಗವನ್ನು ಹುಡುಕಬೇಕು, ಕೌಟುಂಬಿಕ ಸಮಸ್ಯೆಯನ್ನು ಪರಿಹರಿಸಬೇಕು ಎಂಬ ಹಂಬಲ ಶ್ಲಾಘನೀಯ. ಈ ದಿಸೆಯಲ್ಲಿ ಕುಟುಂಬದ ಹಿರೇಮಣಿ ಸಹೋದರಿ ಸುಧಕ್ಕನವರು ಒಂದು ಪುಟ್ಟ ನೌಕರಿಗೆ ಸೇರಿ ಪರಿವಾರವನ್ನು ಸಂಬಾಲನೆ ಮಾಡುತ್ತಾ ಕಷ್ಟದ ಜೀವನದಿಂದ ಉನ್ನತ ಜೀವನದೆಡೆಗೆ ಪರಿವರ್ತಿಸುವ ಮಾರ್ಗವನ್ನು ಕಂಡುಹಿಡಿಯುತ್ತಾ ನಿತ್ಯ ಜೀವನ ಸಾಗಿಸುತ್ತಿದ್ದೆವು.



ತಂದೆ ಶಂಕರಮೂರ್ತಿ

**<u>ಸಾಧನೆಯ ಹಾದಿಯಲ್ಲಿ</u>** : ಯೋಗರಾಜ್‌ಗೆ 17ನೆಯ ವಯಸ್ಸಿನಲ್ಲಿಯೇ ತಾನು ದುಡಿಯಬೇಕೆಂಬ ಮಹತ್ವಾಕಾಂಕ್ಷೆ ಚಿಗುರೊಡೆಯಿತು. ಪ್ರೌಢ ಶಿಕ್ಷಣ ಮುಗಿಸಿದಾಕ್ಷಣವೇ ಉದ್ಯೋಗವನ್ನರಸುತ್ತಾ ಮೊದಲ ಪ್ರಯತ್ನ ಬಿ.ಎಸ್.ಎಫ್‌ಗೆ ಆದರೆ ವಯೋಮಿತಿಯಲ್ಲಿ ಕಡಿಮೆ ಇದ್ದ ಕಾರಣ ಪ್ರಯತ್ನದಲ್ಲಿ ವಿಫಲ, ಇಷ್ಟಕ್ಕೆ ಎದೆಗುಂದದೆ ಪಿ.ಯು.ಸಿ ಪುನಃ ಮರು ಪ್ರಯತ್ನದಲ್ಲಿ ಉದ್ಯೋಗವಾರ್ತೆಯನ್ನಾಲಿಸಿದ ಹಿರಿಯ ಸಹೋದರಿಯ ಸಲಹೆ ಸೂಚನೆಯ ಆಶ್ವಾಸನೆಯ ಮೇರೆಗೆ ಯಾವುದೇ ಶಿಫಾರಸ್ಸಿಲ್ಲದೆ ನೇರವಾಗಿ ಭರ್ತಿ ಎನ್ನುವ ಉದ್ಯೋಗವಾರ್ತೆಯ ಆದೇಶಾನುಸಾರು ಬಿ.ಎಸ್.ಎಫ್. ಸೇರ್ಪಡೆಯ ಎಲ್ಲಾ ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿ ಸಫಲತೆಯ ಸರ್ಟಿಫಿಕೇಟ್ ಕೈಯಲ್ಲಿಡಿದು ತಂದೇಬಿಟ್ಟ ಮಹಾ ಸಾಹಸಿ ವೀರ ಬಾಲಕ ಯೋಗರಾಜ್. ಒಮ್ಮೆಯಾದರೂ ಕ್ರೀಡಾಪಟು ಆಗಿರದ ಈ ಮುಗ್ಧ

ಬಾಲಕನಲ್ಲಿದ್ದ ಧೈರ್ಯ, ಸಾಹಸ, ಸ್ವಾಭಿಮಾನ, ದೇಶಪ್ರೇಮ, ವಿಧೇಯ ಗುಣ ಹಾಗೂ ಏನನ್ನಾದರೂ ಸಾಧಿಸಬಲ್ಲೆ ಎನ್ನುವ ಉತ್ಸಾಹಿ ಪ್ರವೃತ್ತಿಯನ್ನು ಬಣ್ಣಿಸಲಸದಳವು. ಈ ನಿಟ್ಟಿನಲ್ಲಿ ಜನ್ಮ ಕೊಟ್ಟ ತಂದೆಯ ಆಶೀರ್ವಾದ ಹಾಗೂ ಪ್ರಾಣದಾತ ಭಗವಂತನ ಕೃಪೆಯನ್ನು ಮರೆಯುವಂತಿಲ್ಲ. ಯಾವುದೇ ವ್ಯಕ್ತಿಯ ಸಹಾಯವಿಲ್ಲದೆಯೇ ಸ್ವಯಂ ಭಗವಂತನ ಅನುಗ್ರಹದಿಂದ ಇಟ್ಟಂತ ಮಹತ್ತರವಾದ ಮೊಟ್ಟ ಮೊದಲನೆಯ ಸಾಧನೆಯ ಹೆಜ್ಜೆ ಅದೆಷ್ಟು ಪ್ರಭಾವಶಾಲಿ ಮತ್ತು ಪ್ರಶಂಸನೀಯವಾದದ್ದು ಎಂದು ಈಗ ನೋಡೋಣ.



"ಹುಟ್ಟೋದ್ಯಾಕೆ ಸಾಯೋದ್ಯಾಕೆ ಏನಾದರೂ ಸಾಧಿಸಿ ಹೋಗೋಕೆ" ಈ ಮಾತಿನಂತೆ ಏನನ್ನಾದರೂ ಸಾಧಿಸಬೇಕು ಮಾಡಿದರೆ ಒಳ್ಳೆಯದನ್ನೇ ಮಾಡಬೇಕು ಎನ್ನುವ ಉತ್ಕಟೇಚ್ಛೆಯ ಛಲ ಇತನದು. ಅಂತೆಯೇ "ಇಂದು ಅನ್ನದ ಮಗ, ನಾಳೆ ಚಿನ್ನದ ಮಗನಾಗುವನು" ಎಳೆಗರ ಎತ್ತಾಗುವುದು ಎನ್ನುವ ಮುದ್ದಿನ ಅಜ್ಜಿಯ ಮಾತುಗಳಿಗೆ ಸಾಕ್ಷಿಯಾಗುವ ಹಂಬಲ ಹಾಗೂ ತನ್ನ ತಾಯಿಯ ಮಹದಾಸೆ, ಗಂಡುಮಗ ದುಡಿಯಬೇಕು ಆಗ ನಮ್ಮ ಕಷ್ಟ ನೀಗುವುದು ಎನ್ನುವ ಆಸೆಯನ್ನು ಪೊರೈಸಲು ತನ್ನ ಕುಟುಂಬದಲ್ಲಿ ತಂದೆಯಿಲ್ಲದ ಕೊರತೆಯನ್ನು ತುಂಬಲು ಇಡೀ ಪರಿವಾರದ ಸುಖ-ಸಂತೋಷಕ್ಕಾಗಿಯೇ ತನ್ನೆಲ್ಲಾ ಸ್ವಾರ್ಥವನ್ನು ಬದಿಗೊತ್ತಿ ತಮ್ಮ ತಾಯಿ-ಅಜ್ಜಿ, ಅಕ್ಕಂದಿರು ಎಲ್ಲರ ಪ್ರೀತಿ-ಪ್ರೋತ್ಸಾಹ ಹಾಗೂ ದೇಶಸೇವೆಯೇ ಈಶ ಸೇವೆಯಾಗಲಿ ಎನ್ನುವ ಭರವಸೆಯ ಮಾತುಗಳೇ ನನಗೆ "ದಾರಿದೀಪ" ಎಂದು ಹೊರಟೇ ಬಿಟ್ಟ ಭೂಪ 22-02-94 ರಂದು ಎಲ್ಲಾರು ಖುಷಿಯಿಂದ ಬಿಳ್ಕೋಟ್ಟೆವು, ಮೊದಲು ಪಂಜಾಬ್‌ನಲ್ಲಿ ತರಬೇತಿ ಆದರೆ ಜೀವನದಲ್ಲಿ ಒಮ್ಮೆಯೂ ಹೇಳಲಿಲ್ಲ ಭೀತಿ.

ತರಬೇತಿ ಕಠಿಣವಾದರೂ ಕಷ್ಟವೇ ಇಲ್ಲ ಎನ್ನುವ ಖುಷಿಯ ಮಾತುಗಳನ್ನೇ ಹೇಳಿ 15 ದಿನ ರಜೆ ಮುಗಿಸಿ(29-10-94 ರಲ್ಲಿ) ಕಾಶ್ಮೀರಕ್ಕೆ ಕರ್ತವ್ಯದ ಮೇಲೆ ಹೋಗಿ 20-08-95ರಲ್ಲಿ  2 ತಿಂಗಳ ರಜೆ ಬಂದದ್ದು ಇನ್ನು ಪ್ರಾರಂಭವಾಯ್ತು ಈ ಕೆಚ್ಚೆದೆಯ ಶೂರ ವೀರನ
"ಗುರಿ ಉದ್ದೇಶ" :- ಇಡೀ ಪರಿವಾರದ ಜವಾಬ್ದಾರಿ ಕೀರಿಟನ್ನೇ ಧರಿಸಿ ಬಿಟ್ಟು ಪತ್ರ ಮುಖೇನ ನೀವೆಲ್ಲರೂ ಉಂಡುಟ್ಟು ಸುಖವಾಗಿರಿ ನಿಮ್ಮೆಲ್ಲರನ್ನೂ ಚೆನ್ನಾಗಿ ನೋಡಿಕೊಳ್ಳುವುದೇ ನನ್ನ ಜೀವನದ ಗುರಿ ಉದ್ದೇಶ. ಯಾರೂ ಯಾವುದಕ್ಕೂ ಚಿಂತಿಸಬಾರದು ನಾನು ಇದ್ದೇನೆ, ಎನ್ನುವ ಭರವಸೆಯ ಮಾತುಗಳನ್ನೇ ಬರೆದ ಈ ದಿಟ್ಟ ನುಡಿದಂತೆಯೇ ನಡೆದು ತೋರಿಸಿದ, ಪ್ರತಿವರ್ಷ 2 ತಿಂಗಳಿಗೊಮ್ಮೆ ಇಲ್ಲವೇ, ಒಂದು ತಿಂಗಳ ರಜೆಗೆ ಬರುವುದು ಒಂದೊಂದು ಮಹಾನ್ ಉದ್ದೇಶಗಳನ್ನು ಮುಗಿಸಿಯೇ ಹೋಗುವುದು ಅಂದು ಕೊಂಡು ಬಂದ ಗುರಿಯನ್ನು ಸಾಧಿಸುವುದು ಈತನ ಕಲ್ಯಾಣ ಗುಣವನ್ನು ಎತ್ತಿ ತೋರಿಸುತ್ತದೆ. ಮೊದಲು ಒಬ್ಬ ಅಕ್ಕನ ಮದುವೆ, ಅಜ್ಜಿಯ ಶವ ಸಂಸ್ಕಾರ ಸಮಾರಾಧನೆ,31-01-97 ರಂದು ತಮ್ಮ ಸಹೋದರರನ ಸೇರ್ಪಡೆ. ತನ್ನ ತಮ್ಮನೂ ತನ್ನಂತೆಯೇ ಸಮಾನ ನೌಕರಿಗೆ ಸೇರಿದ ಸಂತೋಷ. ಒಟ್ಟಿಗೆ ರಜೆಗೆ ಬಂದು ಖುಷಿ ಮಾಡುತ್ತಿದ್ದು, ಇನ್ನೊಬ್ಬ ಅಕ್ಕನನ್ನು ಮದುವೆ ಮಾಡುವ ಯೊಚನೆ 2000ನೇ ವರ್ಷದಲ್ಲಿ ನಿಶ್ಚಿತಾರ್ಥ 2001ರಲ್ಲಿ ಮದುವೆಮಾಡಿ ತನ್ನ ಇಷ್ಟ-ಕಷ್ಟಗಳನ್ನು ಬದಿಗೊತ್ತಿ ತನ್ನ ತಂದೆಯು ನಿಭಾಯಿಸುವಂತೆ ತಂದೆಯ ಸ್ಥಾನವನ್ನೇ ಅಲಂಕರಿಸಿದ, ಹಿರಿಯಣ್ಣನಾಗಿ ತನ್ನ ತಮ್ಮನನ್ನು ಮದುವೆ ಮಾಡಿ ಎಲ್ಲರ ಸಂತೋಷವನ್ನು ಕಣ್ಣಾರೆ ಕಂಡು ಕಂಬನಿಯನ್ನಿಟ್ಟ ರಣಧೀರ. ಸಾಹಸ ಸಿಂಹನಾಗಿ ಗರ್ಜಿಸಿ ಎಲ್ಲರಿಗೂ ಉತ್ತಮ ವ್ಯವಸ್ಥೆಯನ್ನು ಮಾಡಿ ಜನ-ಮನದಿಂದ, ಬಂಧು-ಬಾಂಧವರಿಂದ 'ಶಭಾಷ್' ಎನ್ನುವ ಘೋಷಣೆಯನ್ನು ಕೇಳಿ ಆನಂದಿಸಿದವ, ತನ್ನತನದ ಸ್ವಾರ್ಥ ಚಿಂತನೆಯತ್ತ ಕಿಂಚಿತ್ತೂ ಯೋಚಿಸದೆ, ತನ್ನ ಕರ್ತವ್ಯದ ಪರಿಪಾಲನೆಯನ್ನು ಮಾಡಿ ಇನ್ನೂ ತನ್ನ ಪರಿವಾರವನ್ನೆ ಬಹಳ ಅತ್ಯುತ್ತಮ ಸ್ಥಿತಿಗೆ ತರಬೇಕೆನ್ನುವ ಮಹದಾಸೆ ಹಾಗೂ ಮುಖ್ಯ ಗುರಿ ಮನದಾಳದಲ್ಲಿಯೇ ಹೊಗೆಯಾಡುತ್ತಿದ್ದ ಕಾರಣ ತನ್ನೆಲ್ಲಾ ಇಷ್ಟಾರ್ಥಗಳನ್ನು ಮೀಸಲಾಗಿಟ್ಟು, ಒಳ್ಳೆಯ ಮನೆಯಲ್ಲಿ ವಾಸಮಾಡಬೇಕು, ತೋಟ ಜಮೀನು ಮಾಡಬೇಕು, ಬರೀ ಜೀವನದುದ್ದಕ್ಕೂ, ಕಷ್ಟದಲ್ಲಿಯೇ ನೊಂದಿರುವ ತನ್ನ ಹೆತ್ತ ತಾಯಿಯನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳಬೇಕು, ಎನ್ನುವ ಮೂಲ ಗುರಿಯನ್ನು ತಲುಪಬೇಕೆನ್ನುವಾಗಲೇ ಈ ಸಾರಿ ಮಾರ್ಚ ಏಪ್ರಿಲ್ 2008 ರಲ್ಲಿ ರಜೆಗೆ ಬರುತ್ತೀನೆಂದು ಪೋನ್‌ನಲ್ಲಿ ಹೇಳಿದ ಬರಲೇ ಇಲ್ಲ.

ತಾನೊಂದು ಬಗೆದರೆ ದೈವವಂದು ಬಗೆಯಿತು.




**ಆಕಸ್ಮಿಕ ಕಣ್ಮರೆ :** ಬೆಟ್ಟದಷ್ಟು ಆಸೆ ಹೊತ್ತು ರಜೆಗೆ ಬರಲೆಂದು ಸಿದ್ದನಾದರೆ, ಇಲ್ಲಿ ತಾಯಿ ಜಾತಕ ಪಕ್ಷಿಯಾಗಿ ಮಗನ ಬರುವಿಕೆಯನ್ನು ಎದುರು ನೋಡುತ್ತಿದ್ದಾರೆ. ಆದರೆ ಕಿವಿಯೂ ಸಹ ನಂಬಲಾಗದಿರುವ ನಿಗೂಢ ರಹಸ್ಯ ಮಾರ್ಚ್ 15–03–08 ಶನಿವಾರ ಬೆಳಗ್ಗೆ 10:15 ಕ್ಕೆ ಗುಜರಾತ್ ರಾಜ್ಯದ ಬುಜ್ ಕಚ್‌ನಲ್ಲಿ ಬಾರ್ಡರ್‌ನಿಂದ ಹೆಡ್‌ಕ್ವಾಟರ್‌ಗೆ ಬರುತ್ತಿರುವಾಗ ರಸ್ತೆ ಅಪಘಾತದಲ್ಲಿ ಈಗಿದ್ದವರು ಇನ್ನಿಲ್ಲವಾದರೂ ಎನ್ನುವ ಬಹಳ ವಿಸ್ಮಯಕಾರಿ ಅಠಾತ್ ಸುದ್ದಿ ನಾಲ್ಕು ದಿಕ್ಕಿನ ಕಡೆಗೂ ಭರಸಿಡಿಲಿನಂತೆ ಪಸರಿಸಿತು. ಈ ಅಹಿತಕರ ಘಟನೆಯನ್ನು ಕೇಳುವ ಮುನ್ನವೇ ಹೆತ್ತಮ್ಮನಿಗೆ ಹಾಗೂ ಒಡಹುಟ್ಟಿದವರಿಗೆ ಕಣ್ಣೀರು ಇದ್ದರು ಕರಳು ಅರಿಯಿತು ಎನ್ನುವ ದುಃಖದ ಸಂಕಟದ ಅನುಭವ ಆಗಿದ್ದು ಅಕ್ಷರ ಸಹ ಸತ್ಯ ಬೂದಿಮುಚ್ಚಿದ ಕೆಂಡದಂತೆ ವೀರ ಯೋಧ ಯೋಗರಾಜ್ ಕನಸುಗಳು ಮನದ ಅಂತರಾಳದಲ್ಲಿಯೇ ಉಳಿದವು ಮೇಣದ ಬತ್ತಿ ಬೆಳಕನ್ನು ಕೊಡಲು ತನ್ನನ್ನು ಕರಗಿಸಿಕೊಂಡಂತೆ ತನ್ನ ಪರಿವಾರದವರ ಸುಖಕ್ಕಾಗಿ ತಾನೇ ಕರಗಿದನು. ಇಂತಹ ಮಹಾನ್ ತ್ಯಾಗಮಯಿ ವೀರಯೋಧ ಯೋಗರಾಜ್ ಪಾರ್ಥಿವ ಶರೀರವನ್ನು ಸರ್ಕಾರದವರು (ಬಿ.ಎಸ್.ಎಫ್) ತನ್ನ ತಾಯಿಗೆ ಸುರಕ್ಷಿತವಾಗಿ ತಲುಪಿಸಿರುವುದಾಗಿ ಒಪ್ಪಿಗೆ ಪತ್ರ ಪಡೆಯಿತು.

**ಅಂತಿಮ ಶ್ರದ್ಧಾಂಜಲಿ :** (ನಮನ) ತನ್ನ ಮಗನ ಪಾರ್ಥಿವ ಶರೀರ ಬಂದು ತಲುಪುವರೆಗೂ ಹೆತ್ತ ತಾಯಿಗೆ ಮಗನ ಸಾವಿನ ಸುದ್ದಿಯನ್ನೇ ತಿಳಿಸದ ಸಂಬಂಧಿಗಳ ಹಾಗೂ ಗ್ರಾಮಸ್ಥರ ಪಾತ್ರ ಇಲ್ಲಿ ಶ್ಲಾಘನೀಯವಾದದ್ದು, “ಜೈ ಜವಾನ್ ಜೈ ಕಿಸಾನ್” ಎನ್ನುವಂತೆ ಯಾವ ಮಹಾನ್ ವ್ಯಕ್ತಿಗೂ ಕಾಣಸಿಗದ ಸಕಲ ಸರ್ಕಾರಿ ಗೌರವ ಮಾರ್ಯಾದೆಯಿಂದ ಸರ್ಕಾರವು ಗ್ರಾಮಸ್ಥರೆದುರಿನಲ್ಲಿ ನಮನ ಸಲ್ಲಿಸಿ ಗ್ರಾಮಸ್ಥರು ಶವ ಸಂಸ್ಕರದ ಜಾಗವನ್ನು ಸೈನಿಕರಿಗೆ ಎಂದು ಈತನ ಕಡೆಯಿಂದ ಮೀಸಲಾಗಿಟ್ಟ ಸ್ಥಳವನ್ನು ನಿರ್ಧರಿಸಿದಂತೆ ಮಾಡಿಕೊಂಡರು, ಸಾರ್ವಜನಿಕರ ಪ್ರದರ್ಶನಕ್ಕೆ ಕೆಲಕಾಲ ಇಡಲಾಗಿದ್ದು, ಊರ ತುಂಬೆಲ್ಲಾ ಮೆರವಣಿಗೆ ಮಾಡಿದರು, ಊರ ಸುತ್ತ–ಮುತ್ತಲಿನ ಜನ ಸಾಗರ ಯಾರ ಮನೆಯಲ್ಲಯೂ ಯಾರೊಬ್ಬರೂ ಇಲ್ಲದಂತೆ ತನ್ನ ಮನೆಯ ದುಃಖ ಎನ್ನುವಂತೆ ಎಲ್ಲರ ದುಃಖದ ಹೊನಲು ಮುಗಿಲು ಮುಟ್ಟಿತು. ಆದರೆ ಪರಿವಾರದವರೆಲ್ಲರಿಗೂ ಈ ದೃಶ್ಯವನ್ನು ನೋಡಿ ಹಾಗೂ ವೀರ ಯೋಧ ಸಿ.ಎಸ್.ಯೋಗರಾಜ್ “ಅಮರ್ ರಹೇ ಹೈ” ಈ ಘೋಷಣೆಯನ್ನು ಕೇಳಿ ದುಃಖದ ಕಂಬನಿಗಳು ಆನಂದ ಬಾಷ್ಪಗಳಾಗಿ ಕಣ್ಣುಗಳಲ್ಲೇ ಕಣ್ಣೀರು ಹಿಂಗಿಹೋದವು. “ಅಮರ” ಈ ಪದದ ಅಮೋಘ ಘೋಷಣೆ ಕಿವಿಯಲ್ಲಿ ಇಂದಿಗೂ ರಾರಾಜಿಸುತ್ತಿದ್ದು ಮನಸ್ಸು ಖುಷಿಯ ನಗಾರಿಯನ್ನು ಬಾರಿಸುತ್ತಿದೆ. ಇಂತಹ ಮಹಾನ್ ತ್ಯಾಗಿಗೆ ಜನ್ಮಕೊಟ್ಟ ತಾಯಿಯೇ ಧನ್ಯ ಮಾತೃ ಭೂಮಿ ಧನ್ಯ. ಸರ್ಕಾರವು ಕಳಿಸಿಕೊಟ್ಟ ಮಿಲ್ಟ್ರಿ ಸಿಬ್ಬಂಧಿ ವರ್ಗದವರು ಮೌನಾಚರಣೆ ಮಾಡಿ ಗುಂಡು ಹಾರಿಸಿ ಹೆತ್ತ ತಾಯಿಗೆ ನಿಮ್ಮ ಮಗ ಕಣ್ಮರೆಯಾಗಿಲ್ಲ. ಅಮರರಾದರು ಈ ಪ್ರತೀಕವಾಗಿ ರಾಷ್ಟ್ರದ ತ್ರಿವರ್ಣಧ್ವಜವನ್ನೇ ಕೊಡುಗೆಯಾಗಿ ಕೊಡುತ್ತಿದ್ದೇವೆ. ಎನ್ನತ್ತಾ ತಾಯಿಯ ಕೈಯಲ್ಲಿ ಅಲ್ಲಿದ್ದವರು ಸಂಪ್ರದಾಯದ ವಿಧಿ–ವಿಧಾನಗಳ ಮೂಲಕ ಅಂತಿಮ ಸುನಮನಗಳನ್ನು ಸಲ್ಲಿಸಲಾಯಿತು. ಇಂತಹ ಜವಾನ್ ಕೋಟಿಗೊಬ್ಬ ಜೈ ಜವಾನ್ ಜೈಹಿಂದ್ ವೀರಯೋಧನಾದಂತಹ ಅಂತಿಮ ನಮನ ಯೋಗರಾಜ್‌ನ ನೆನೆಪು ಚಿರ ಸ್ಮರಣೀಯವಾಗಲೆಂದು ಮಹಾನ್ ತ್ಯಾಗ ದೇಶ ಪ್ರೇಮ ಮುಂಬರದಿರುವ ಪೀಳಿಗೆಯಲ್ಲಿ ಹೆಸರು ಹಸಿರಾಗಿರಲು ಇತಿಹಾಸದ ಪುಟಗಳಲ್ಲಿ ಬರೆಯಲು ದಾವಣಗೆರೆ ಜಿಲ್ಲೆ ಗೊಪ್ಪೇನಹಳ್ಳಿ ಗ್ರಾಮದ ಕೀರ್ತಿ ಪತಾಕೆಯನ್ನು ಮೊಳಗಿಸಲು ತನ್ನ ಅಣ್ಣನ ಮೇಲಿರುವ ದೈವಭಕ್ತಿ, ಪ್ರೀತಿ–ವಾತ್ಸಲ್ಯದ ಹೆಗ್ಗುರುತಾಗಿ ಸ್ವ ಪ್ರಯತ್ನ



ಮಾಡಿ ತಮ್ಮ ಲೋಕೇಶ್ ಮೂರೇ ತಿಂಗಳಲ್ಲಿ ಮಂಟಪ ಕಟ್ಟಿಸಿ ಶಿಲಾ ಪ್ರತಿಮೆಯನ್ನು ಸಹ ಮೂರೇ ತಿಂಗಳಲ್ಲಿ ಪ್ರತಿಷ್ಠಾಪನೆ ಮಾಡಿದ ಯಶಸ್ಸು ಕಿರಿಯ ಸಹೋದರ ಲೋಕೇಶ್ ಇವರಿಗೆ ಸಲ್ಲತಕ್ಕದ್ದು, ಅಣ್ಣನ ಸ್ಮಾರಕ ವಿಗ್ರಹದ ಎದುರಿನಲ್ಲಿಯೇ ಧ್ವಜ ಕಂಬದ ನಿರ್ಮಾಣ ಮಾಡಲಾಗಿದ್ದು, ಎಲ್ಲಾ ರಾಷ್ಟ್ರೀಯ ಹಬ್ಬಗಳಲ್ಲಿ ವೀರ ಮರಣವನ್ನಪ್ಪಿದ್ದ ಅಮರವಾದ ತ್ಯಾಗಜೀವಿ ಯೋಗರಾಜ್‌ನಿಗೆ ತನ್ನ ತಾಯಿಯಿಂದಲೇ, ಪ್ರೌಢಶಾಲೆ ಮತ್ತು ಕಾನ್ವೆಂಟ್ ಮಕ್ಕಳನ್ನು ಒಟ್ಟುಗೂಡಿಸಿಕೊಂಡು, ಊರಿನ ಗಣ್ಯರನ್ನು ಒಟ್ಟುಗೂಡಿಸಿಕೊಂಡು, ಧ್ವಜಾರೋಹಣ ಕಾರ್ಯಕ್ರಮ ನಡೆಯುತ್ತಿದೆ. ದಾರಿಹೋಕರಿಗೆ ಶ್ರದ್ಧಾ ಸುನಮನಗಳನ್ನು ಅರ್ಪಿಸುವಂತಾ ದೇಶ ಪ್ರೇಮಿಗಳಿಗೆ ಶಾಶ್ವತವಾದ ಮಾದರಿಯ ಸ್ಮಾರಕ ದೇಶ ಪ್ರೇಮಿಗಳಿಗೆ ನೆನಪನ್ನು ತಂದುಕೊಡುವ ಸ್ಮಾರಕ ಇದಾಗಿದೆ.

ಜೈಹಿಂದ್, ಜೈ ಭಾರತ ಮಾತೆ


More info Contact
Onkaraswamy Goppenahalli
Sydney-Australia
onkar@bigpond.net.au

Contact his Brother
C.S.Lokesh
s/o Sharadamma
Goppenahalli,
Channagiri Tq
Davanagere Dist
Karnataka- India